2. 66 ಕೆ.ವಿ. ಗಾವಡಗೆರೆ ಉಪ ವಿದ್ಯುತ್ ಕೇಂದ್ರದ ಕಾಮಗಾರಿಗಳನ್ನು 2009–10ರ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.
3. 66 ಕೆ.ವಿ. ಹೊಸೂರು ಉಪ ವಿದ್ಯುತ್ ಕೇಂದ್ರದ ಕಾಮಗಾರಿಗಳನ್ನು 2009–10ರ ಸಾಲಿನಲ್ಲಿ ಕಐಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.
4. ಹುಣಸೂರು ಸಮೀಪ ಕಲ್ಲುಬೆಟ್ಟದ 220 ಕೆ.ವಿ. ಸ್ವೀಕರಣಾ ಕೇಂದ್ರದ ಕಾಮಗಾರಿಯನ್ನು 2009–10ರ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಇ) ಹಾಲಿ ಈ ಯೋಜನೆಗಳು ನೆನೆಗುದಿಗೆ ಬಿದ್ದಿದ್ದು (ಪ್ರಕ್ರಿಯೆ ಸ್ಥಗಿತಗೊಂಡಿದ್ದು), ಚಾಲನೆ ನೀಡಲು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸುವುದು?

ಈ ಯೋಜನೆಗಳ ಕಾಮಗಾರಿಗಳನ್ನು 2009–10 ರ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಸಂಖ್ಯೆ: ಇಎನ್ 21 ಪಿಪಿಎಂ 2009

(ಕೆ.ಎಸ್. ಈಶ್ವರಪ್ಪ)
ಇಂಧನ ಸಚಿವರು.

ಕರ್ನಾಟಕ ವಿಧಾನ ಸಭೆ

316 ಶ್ರೀ ಸುರೇಶ್ ಬಾಬು ಸಿ.ಬಿ (ಚಿಕ್ಕನಾಯಕನಹಳ್ಳಿ)

ಅ) ತುಮಕೂರು ಜಿಲ್ಲೆಯ ಯಾವ ಯಾವ ತಾಲ್ಲೂಕುಗಳ ಗ್ರಾಮಗಳಲ್ಲಿ ಫ್ಲೋರೈಡ್‌ಯುಕ್ತ ನೀರು ಕಂಡು ಬಂದಿರುತ್ತದೆ;

ತುಮಕೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಕೆಲವು ಕುಡಿಯುವ ನೀರಿನ ಜಲಮೂಲಗಳಲ್ಲಿ ಫ್ಲೋರೈಡ್‌ಯುಕ್ತ ಕಲುಷಿತ ನೀರಿರುವುದು ಕಂಡು ಬಂದಿದೆ.

ಆ) ಫ್ಲೋರೈಡ್‌ಯುಕ್ತ ಮತ್ತು ನೈಟ್ರೇಟ್‌ಯುಕ್ತ ನೀರು ಬಳಸುವುದರಿಂದ ಆಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ಸರ್ಕಾರವು ಯಾವ ರೀತಿಯ ನಿವಾರಣಾ ಕ್ರಮವನ್ನು ಕೈಗೊಂಡಿದೆ;

ಭೂಮಿಯ ಮೇಲ್ಮೈ ಜಲಮೂಲ ಆಧಾರಿತ ಪರ್ಯಾಯ ಕುಡಿಯುವ ನೀರಿನ ಯೋಜನೆಗಳನ್ನು ಅನುಷ್ಠಾನಗೊಳಿಸುವುದರ ಜೊತೆಗೆ 25 ಡಿ–ಫ್ಲೋರಿಡೇಶನ್ ಘಟಕಗಳನ್ನು ಈಗಾಗಲೇ ಅಳವಡಿಸಲಾಗಿದೆ. ಇದಲ್ಲದೆ, 4974

ಕೌಟುಂಬಿಕ DF Filter ಗಳನ್ನು ಸಹ ನೀರಿನ ಗುಣಮಟ್ಟದ ಸಮಸ್ಯೆಗೊಳಗಾಗಿರುವ ಜನವಸತಿಗಳಿಗೆ ಒದಗಿಸಲಾಗಿದೆ.

ಇ) ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಈ ರೀತಿಯ ಕಲುಷಿತ ನೀರನ್ನು ಶುದ್ಧೀಕರಿಸಲು ಶುದ್ಧೀಕರಣ ಘಟಕಗಳನ್ನು ತೆರೆಯುವ ಯೋಜನೆಯ ಬಗ್ಗೆ ಸರ್ಕಾರವು ಚಿಂತನೆ ನಡೆಸುವುದೇ;

ಸೂಕ್ತ ಭೂಮಿಯ ಮೇಲ್ಮೈ ಜಲಮೂಲ ದೊರೆಯದಿರುವೆಡೆಗಳಲ್ಲಿ ಶುದ್ಧೀಕರಣ ಘಟಕಗಳನ್ನು ಅಳವಡಿಸಲು ಪರಿಶೀಲಿಸಲಾಗುವುದು.

ಈ) ಶುದ್ಧೀಕರಣ ಘಟಕಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಪ್ರತಿ ತಾಲ್ಲೂಕಿನಲ್ಲೂ ಸ್ಥಾಪಿಸಲು ಸರ್ಕಾರವು ಕ್ರಮಕೈಗೊಳ್ಳಲಾಗುವುದೇ?

ಅಗತ್ಯತೆ ಮತ್ತು ಅನುದಾನ ಲಭ್ಯತೆಯನುಸಾರ ಕ್ರಮ ವಹಿಸಲಾಗುವುದು.

A. In Which are the taluks of Tumkur District fluoride content water is noticed in the villages;

In some of the Drinking water sources of all the taluks of Tumkur district water source is found to be contaminated with fluoride.

B. What type of mitigation measure is initiated by Government in connection with the ill-effects being happened owing to the use of Fluoride and Nitrate content water;

Alternative drinking water schemes based on the surface water source are being implemented. In addition to this, 25 De-fluoridation plants have been installed together with 4974 household DF Filters distribution in the water quality affected habitations.

C. Will the Government think about putting up of De-fluoridation plants for purifying this type of contaminated water in all the Taluk head quarters.

It will be examined to install purification plants, in such a place where there is no suitable surface water source.

D. Whether Government will take action to Install purification plants in each taluk, in the interest of public?

Action will be taken depending on the need and availability of funds.

ಸಂ:ಗ್ರಾಅಪ 18 ಗ್ರಾನೀಸ(1)09

(ಶೋಭಾ ಕರಂದ್ಲಾಜೆ)

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

321 ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬರಾವ್ (ಜಮಖಂಡಿ)

ಮಾನ್ಯ ಪಶುಸಂಗೋಪನಾ ಸಚಿವರು

ಅ) ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ಪಶು ಚಿಕಿತ್ಸಾಲಯಗಳೆಷ್ಟು?

1940

ಆ) ಒಟ್ಟು ಖಾಲಿಯಿರುವ ವೈದ್ಯರ ಹುದ್ದೆಗಳೆಷ್ಟು ಮತ್ತು ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡ ಕ್ರಮಗಳೇನು?

1088.

100 ಜನ ನಿವೃತ್ತ ಪಶುವೈದ್ಯರನ್ನು ಗುತ್ತಿಗೆ ಮೇಲೆ ಭರ್ತಿ ಮಾಡಿಕೊಳ್ಳಲು ಸರ್ಕಾರ ಅನುಮತಿ ನೀಡಿದೆ. ಈ ಪೈಕಿ 84 ನಿವೃತ್ತ ಪಶುವೈದ್ಯಾಧಿಕಾರಿಗಳು 2 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುತ್ತಾರೆ.

ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ 200 ಪಶುವೈದ್ಯಾಧಿಕಾರಿಗಳನ್ನು ನೇರ ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆ ಚಾಲನೆಯಲ್ಲಿದೆ. ಅಂತಿಮ ಆಯ್ಕೆ ಪಟ್ಟಿ ಸ್ವೀಕೃತಗೊಂಡ ನಂತರ ಖಾಲಿ ಇರುವ ಪಶುವೈದ್ಯಾಧಿಕಾರಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಇ) ಜಮಖಂಡಿ ಕ್ಷೇತ್ರದ ಹುನ್ನೂರ, ಹಿರೇಪಡಸಲಗಿ ಹಾಗೂ ಜಂಬಗಿ (ಬೆ.ಕೆ.)ಗ್ರಾಮಗಳಿಗೆ ಅತೀ ಅವಶ್ಯವಿರುವ ಪಶುಚಿಕಿತ್ಸಾಲಯ ಗಳನ್ನು ಯಾವಾಗ ಮಂಜೂರು ಮಾಡಲಾಗುವುದು?

2003ರ ಜಾನುವಾರು ಗಣತಿ ಪ್ರಕಾರ, ಜಮಖಂಡಿ ತಾಲ್ಲೂಕಿನಲ್ಲಿ 1,18,599 ಜಾನುವಾರು ಘಟಕಗಳಿವೆ. ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ ಪ್ರತಿ 5000 ಜಾನುವಾರು ಘಟಕಗಳಿಗೆ ಒಂದು ಪಶುಚಿಕಿತ್ಸಾಲಯ ಇರಬೇಕಾಗಿದೆ. ಅದರಂತೆ, ಜಮಖಂಡಿ ತಾಲ್ಲೂಕಿನಲ್ಲಿ 24 ಪಶುಚಿಕಿತ್ಸಾಲಯಗಳ ಅವಶ್ಯಕತೆಯಿದ್ದು, ಅಲ್ಲಿ 27 ಪಶುವೈದ್ಯ ಸಂಸ್ಥೆಗಳು ಮಂಜೂರಾಗಿ ಕಾರ್ಯನಿರ್ವಹಿಸುತ್ತಿವೆ. ಆದ್ದರಿಂದ,